ಶ್ರೀ ಎಂ. ವಿ. ಕೃಷ್ಣಪ್ಪ.—ಬಾಂಡ್ ಫೀಜು ಕಟ್ಟಿದಮೇಲೆ ಸರ್ಕಾರದವರು ಪಕ್ಕಾ ಪೋಡು ಮಾಡಿಕೊಡಬೇಕು. ಆದರೆ ಸರ್ವೇಯರುಗಳು ಜಾಸ್ತಿ ಇಲ್ಲದೆ ಇದ್ದದ್ದರಿಂದ ಆ ಕೆಲಸವನ್ನು ಮಾಡಿ ಕೊಡುವುದು ಸ್ವಲ್ಪ ವಿಳಾನವಾಗಿದೆ. ಈಗ ಹೊಸದಾಗಿ 500 ಜನ ಸರ್ವೇಯರುಗಳನ್ನು ನೇಮಕ ಮಾಡಿಕೊಂಡಿದ್ದೇವೆ. ಅವರಿಗೆ ತರಬೇತಿಯನ್ನು ಕೊಟ್ಟು ಆ ಕೆಲಸವನ್ನು ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು.—622ನೆಯ ಪ್ರಶ್ನೆಯನ್ನು ಶ್ರೀ ಡಿ. ಪರಮೇಶ್ವರಪ್ಪನವರ ಪರವಾಗಿ ಶ್ರೀ ಸಿ.ಆರ್. ರಂಗೇಗೌಡರು ಹಾಕಬಹುದು.

Fire Accident at Masadi Village.

*Q.—622. Sri C. R. RANGE GOWDA (Magadi) [on behalf of SRI D. PARAMESWARAPPA (Honnali)].—

Will the Minister for Revenue be pleased to state:—

(*a*) whether any accidental fire occurred at the Harijan Colony of Masadi village in Honnali Taluk on 19th January 1966;

(*b*) the number of families who have suffered on account of the same ;

(*c*) the action taken by the Government to give relief to the affected people ;

(*d*) whether they would extend substantial assistance to the homeless Harijans who have suffered by the accident ?

A.—Sri M. V. KRISHNAPPA (Minister for Revenue).—

(*a*) Yes.

(*b*) Eight.

(*c*) Cash relief to the tune of Rs. 200 (at Rs. 25 each) and building materials to the extent of Rs. 205 (at Rs. 25 each to eight and Rs. 30 to one) have been sanctioned to the victims.

(*d*) Relief admissible has been sanctioned.

ಶ್ರೀ ಸಿ. ಆರ್. ರಂಗೇಗೌಡ.—ಸ್ವಾಮಿ, ಹೊನ್ನಾಳಿ ತಾಲ್ಲೂಕಿನ ಮಸಡಿ ಗ್ರಾಮದಲ್ಲಿ 8 ಹರಿಜನರ ಮನೆಗಳಿಗೆ ಬೆಂಕಿ ಬಿದ್ದು ಅವರು ತೊಂದರೆಗೀಡಾಗಿದ್ದಾರೆ ಎಂದು ಹೇಳಿದ್ದೀರಿ, ಅವರಲ್ಲಿ ಪ್ರತಿಯೊಂದು ಕುಟುಂಬಕ್ಕೂ ಎಷ್ಟು ನಷ್ಟವಾಗಿದೆ, ಮತ್ತು ಅವರಿಗೆ ಪ್ರತಿಯೊಂದು ಕುಟುಂಬಕ್ಕೂ ಸರ್ಕಾರದವರು ಎಷ್ಟು ಪರಿಹಾರವನ್ನು ಕೊಟ್ಟಿದ್ದಾರೆ ಎಂಬುದನ್ನು ಹೇಳುತ್ತೀರಾ ?

†ಶ್ರೀ ಎಂ. ವಿ. ಕೃಷ್ಣಪ್ಪ.—ಅವು ಬಡವರ ಮನೆಗಳು. ಅಲ್ಲ ಸುಮಾರು 10 ಮನೆಗಳಿಗೆ 2½ ಸಾವಿರ 3 ಸಾವಿರ ರೂಪಾಯಿಗಳವರೆಗೆ ನಷ್ಟವಾಗಿದೆ ಎಂದು ಅಧಿಕಾರಿಗಳು ವರದಿ ಮಾಡಿದ್ದಾರೆ. ಈ ಅನಾಹುತಕ್ಕೆ ತುತ್ತಾದವರಿಗೆ ಪ್ರತಿಯೊಬ್ಬರಿಗೂ 25 ರೂಪಾಯಿಗಳ ನಗದು ಪರಿಹಾರವನ್ನೂ ಮತ್ತು 250 ರೂಪಾಯಿಗಳು ಬೆಲೆ ಬಾಳುವ ಮರಮುಟ್ಟುಗಳನ್ನೂ ಕೊಟ್ಟಿದ್ದೇವೆ.

ಶ್ರೀ ಸಿ. ಆರ್. ರಂಗೇಗೌಡ.—ಅಲ್ಲಿ ತೊಂದರೆಗೀಡಾದವರಿಗೆ 25 ರೂಪಾಯಿಗಳ ನಗದು ಹಣವನ್ನು, ಮತ್ತು ಮರಮುಟ್ಟುಗಳನ್ನೂ ಕೊಟ್ಟರೆ ಯಾವ ಪುರುಷಾರ್ಥವನ್ನೂ ಸಾಧಿಸಿದಂತೆ ಆಗುವುದಿಲ್ಲ. ಅವು ಬಡವರ ಮನೆಗಳು, ಆದ್ದರಿಂದ ಅವರಿಗೆ ಪ್ರತಿಯೊಂದು ಕುಟುಂಬಕ್ಕೂ 250 ರೂಪಾಯಿ ಹಣವನ್ನೂ, ಮತ್ತು ಮರಮುಟ್ಟುಗಳನ್ನೂ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರಿಗೆ ಹಣವನ್ನು ಕೊಟ್ಟರೆ ಅದನ್ನು ಅವರು ತಿಂದು ಹಾಕುತ್ತಾರೆ. ಅದ್ದರಿಂದ ಅವರಿಗೆ ಹತ್ತಿರ ಇರುವ ಕಾಡುಗಳಿಂದ ಮನೆಗಳನ್ನು ಕಟ್ಟಿಕೊಳ್ಳಲು ಮರ ಮುಟ್ಟುಗಳನ್ನು ಒದಗಿಸುವಂತೆ ಅನುಕೂಲ ಮಾಡಿಕೊಟ್ಟಿದ್ದೇವೆ. ಅವರಿಗೆ ಆಗಿರತಕ್ಕ ನಷ್ಟವನ್ನೆಲ್ಲಾ ನಾವು ತುಂಬಿಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಬೇಸಿಗೆ ಕಾಲ ಬಂದರೆ ನೂರಾರು ಬೆಂಕಿ ಅನಾಹುತಗಳು ಆಗುತ್ತವೆ. ಅದನ್ನೆಲ್ಲಾ ಸರ್ಕಾರದವರು ತುಂಬಿಕೊಡಬೇಕಾದರೆ ಸರ್ಕಾರದ ಬೊಕ್ಕಸದಲ್ಲಿರತಕ್ಕ ಹಣವನ್ನೆಲ್ಲಾ ಅದಕ್ಕೆ ಕೊಡಬೇಕಾಗುತ್ತದೆ.

———

Providing of Lands for Village Extension.

*Q.—654. Sri S. M. GURADDI (Muddebihal).—

Will the Minister for Revenue be pleased to state :—

(*a*) whether it is a fact that the people of Talikote have represented to them to provide land necessary for village extension ;

(*b*) whether it is a fact that they have remitted the required amount in the treasury according to the Government Order ;

(*c*) if so, the stage at which the matter stands at present ?

A.—Sri M. V. KRISHNAPPA (Minister for Revenue).—

(*a*) Yes.

(*b*) Yes.

(*c*) As the Town Panchayat Committee is not in favour of the acquisition, the matter has been dropped.

ಶ್ರೀ ಎಸ್. ಎಂ. ಗುರೆಡ್ಡಿ.—ತಾಳೀಕೋಟೆಯ ಜನರು ಗ್ರಾಮ ಬಡಾವಣೆಗೆ ಬೇಕಾದ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಸಂಬಂಧದಲ್ಲಿ ಸರ್ಕಾರದ ಖಜಾನೆಗೆ ಎಷ್ಟು ಹಣವನ್ನು ಎಷ್ಟು ವರ್ಷಗಳ ಹಿಂದೆ ಜಮಾ ಮಾಡಿದರು ?

†ಶ್ರೀ ಎಂ. ವಿ. ಕೃಷ್ಣಪ್ಪ.—ಅವರು ಸರ್ಕಾರದ ಖಜಾನೆಗೆ ಹಣವನ್ನು ಜಮಾಮಾಡಿ 4-5 ವರ್ಷಗಳಾಯಿತು. ಆ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಅಲ್ಲಿನ ಟೌನ್ ಪಂಚಾಯಿತಿ ಸಮಿತಿಯವರು ಒಂದು ನಿರ್ಣಯವನ್ನು ಮಾಡಿ ಅದು ಲ್ಯಾಂಡ್ ಅಕ್ವಿಜಿಷನ್ ಆಕ್ಟ್ ಪ್ರಕಾರ ನಮಗೆ ಬೇಡ ಎಂದು ಹೇಳಿದ್ದಾರೆ. ಆದ್ದರಿಂದ ಅದು ತಡವಾಗಿದೆ.

ಶ್ರೀ ಎಸ್. ಎಂ. ಗುರೆಡ್ಡಿ.—ಅವರು ಎಷ್ಟು ಹಣವನ್ನು ಯಾವ ಇಸವಿಯಲ್ಲಿ ಸರ್ಕಾರದ ಖಜಾನೆಗೆ ಜಮಾ ಮಾಡಿದರು ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರು 20,659 ರೂಪಾಯಿ 65 ಪೈಸೆಯನ್ನು ಈಗ್ಗೆ ನಾಲ್ಕು ವರ್ಷಗಳ ಹಿಂದೆ ಜಮಾ ಮಾಡಿದ್ದಾರೆ.

ಶ್ರೀ ಎಸ್. ಎಂ. ಗುರೆಡ್ಡಿ.—ಈಗ್ಗೆ ನಾಲ್ಕು ವರ್ಷಗಳ ಹಿಂದೆ ಅವರು ಖಜಾನೆಗೆ ಹಣವನ್ನು ಜಮಾ ಮಾಡುವ ಕಾಲಕ್ಕೆ ಆ ಪಂಚಾಯಿತಿಯವರ ಅಭಿಪ್ರಾಯ ಸರ್ಕಾರಕ್ಕೆ ಗೊತ್ತಿರಲಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ಅದಕ್ಕೆ ಸಂಬಂಧಪಟ್ಟ ಅಕ್ವಿಸಿಷನ್ ಪ್ರೊಸೀಡಿಂಗ್ಸ್ ಆಗ ಬೇಕಾಗಿರುವುದರಿಂದ ಪಂಚಾಯಿತಿಯವರು ಅದಕ್ಕೆ ಒಪ್ಪಿಗೆ ಕೊಡಬೇಕು. ಆದರೆ ಅವರು ಅದಕ್ಕೆ ಒಪ್ಪಿಗೆಯನ್ನು ಕೊಡುತ್ತಿಲ್ಲ.

ಶ್ರೀ ಎಸ್. ಎಂ. ಗುರೆಡ್ಡಿ.—ಅಲ್ಲಿಯ ಸದಸ್ಯರವರು ಅದಕ್ಕೆ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಅದ್ದರಿಂದ ಮತ್ತೆ ಅದಕ್ಕೆ ಪಂಚಾಯಿತಿಯವರ ಅನುಮತಿ ಅವಶ್ಯ ಇರುವುದಿಲ್ಲ. ಅವರ ಸಲುವಾಗಿ ಆ ಸೈಟುಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?